

# ಬಾಲಿಗೊಂದು ಭೇಟಿ







■ ಚಿತ್ರ– ಲೇಖನ: **ಸುರೇಖಾ ಬಾರ್ಕೂರು**

ಇಂಡೋನೇಷ್ಯಾದ ಬಾಲಿ ದ್ವೀಪ! ಇಲ್ಲೊಂದು ಪಾಂಡವ ಬೀಚ್ ಇದೆ. ನೂರಾರು  ಚಿಪ್ಪುಗಳಿರುವ, ಶುಭ್ರವಾದ ತಿಳಿನೀಲಿ ಬಣ್ಣದ ಸಮುದ್ರ ತೀರ. ಉಲುವಾಟು ದೇವಸ್ಥಾನ ಇರುವುದು ಸಮುದ್ರದ ತಟದಲ್ಲಿರುವ ಬೆಟ್ಟದಂತಹ ಜಾಗದಲ್ಲಿ (ಉಲು=– ತುದಿ; ವಟು= ಬಂಡೆ). ಉದ್ದಕ್ಕೂ ಕಾಣಿಸುವ ನೀಲಿ ಸಮುದ್ರ. ಕಾಡಿನ ಮಧ್ಯೆ ದೇವಸ್ಥಾನ.

ಇಲ್ಲಿನ ಕೆಚಾಕ್ ನೃತ್ಯ ವೀಕ್ಷಣೆ ಪ್ರಮುಖ ಆಕರ್ಷಣೆ. ರಾಮಾಯಣದ ಕಥೆಯನ್ನು ಆಡಿ ತೋರಿಸುವ ಕಲಾವಿದರು. ನೃತ್ಯಕ್ಕಾಗಿಯೇ ಒಂದು ಸುಂದರವಾದ ವೇದಿಕೆಯನ್ನು ನಿರ್ಮಿಸಿದ್ದಾರೆ. ವೃತ್ತಾಕಾರದ ಸಣ್ಣ ಮೈದಾನ. ಪ್ರೇಕ್ಷಕರು ಕೂರುವ ಜಾಗ ಎತ್ತರದಲ್ಲಿದ್ದರೆ ತಳಭಾಗದಲ್ಲಿ ವೇದಿಕೆ. ಪ್ರವೇಶದ್ವಾರ ಸಮುದ್ರವಿರುವ ದಿಕ್ಕಿನಲ್ಲಿ. ಸಮುದ್ರದ ಶಬ್ದ, ನೋಟ ಹಾಗೂ ಸೂರ್ಯಾಸ್ತದ ಹಿನ್ನೆಲೆಯಲ್ಲಿ ನೃತ್ಯ ನೋಡುವ ಅವಕಾಶ. ಮಧ್ಯದಲ್ಲಿ ದೀವಟಿಗೆಯನ್ನು ಹಚ್ಚಿಟ್ಟಿರುತ್ತಾರೆ. ಮುಖ್ಯಸ್ಥ ಧ್ವನಿವರ್ಧಕದಲ್ಲಿ ನೃತ್ಯ ಶುರುವಾಗುವ ಸೂಚನೆ ಕೊಟ್ಟಂತೆ ಪಂಚೆಯುಟ್ಟ ವೇಷಧಾರಿಗಳು ವೃತ್ತಾಕಾರದಲ್ಲಿ ದೀಪದ ಸುತ್ತ ಕುಳಿತರು. ಇವರು ರಾಮಾಯಣದ ಕೋತಿಗಳನ್ನು  ಪ್ರತಿನಿಧಿಸುತ್ತಾರೆ. ವೇದಿಕೆ ಪ್ರವೇಶಿಸುವಾಗಲೇ ಕೆಚಾಕ್ ಕೆಚಾಕ್ ಎಂದು ಕಿರುಚುತ್ತಾ ಪ್ರವೇಶಿಸುತ್ತಾರೆ. ನೃತ್ಯ ಮುಗಿಯುವವರೆಗೂ ಈ ಮಂತ್ರ ಮುಂದುವರಿಯುತ್ತದೆ. ಈ ಮಂತ್ರದಿಂದಾಗಿಯೇ ಇದಕ್ಕೆ ಕೆಚಾಕ್ ನೃತ್ಯವೆಂದು ಹೆಸರು. ರಾಮ, ಸೀತೆ, ರಾವಣ, ಸೀತಾಪಹರಣ, ಹನುಮಂತನ ಬಂಧನ, ಲಂಕಾದಹನ, ಸೀತೆಯ ಬಿಡುಗಡೆ ಎಲ್ಲವನ್ನೂ ಒಂದು ಗಂಟೆಯ ಅವಧಿಯಲ್ಲಿ ತೋರಿಸಿದರು. ಮನಸೆಳೆವ ಪ್ರದರ್ಶನ.

ಉಬುದ್‌ನಲ್ಲೂ ಒಂದು ವಿಶೇಷ ನೃತ್ಯ ಸವಿಯಬಹುದು. ಇದು ಬರೊಂಗ್ ಡ್ಯಾನ್ಸ್. ಈ ಬರೊಂಗ್ ಡ್ಯಾನ್ಸ್ ಕೂಡಾ ಕಥಾನೃತ್ಯದಂತೆ. ಬರೊಂಗ್ ಮುಖ್ಯ ಪಾತ್ರದ ಹೆಸರು. ಬರೊಂಗ್ ಅಂದರೆ ಒಳ್ಳೆಯದು, ರಂಗ್ಡಾ ಅಂದರೆ ಕೆಟ್ಟದು. ಒಳ್ಳೆಯ ಮತ್ತು ಕೆಟ್ಟ ಅಂಶಗಳ ಮಧ್ಯೆ ಸಮತೋಲನವಿರಬೇಕು ಎಂಬ ನೀತಿಯನ್ನು ಈ ಕಥಾನೃತ್ಯವು ಸಾರುತ್ತದೆ. ಬಾಲಿಯ ಸಾಂಪ್ರದಾಯಿಕ ವಾದ್ಯದ ಹಿನ್ನೆಲೆಯಲ್ಲಿ ಕಥೆ ಮುಂದುವರಿಯುತ್ತದೆ. ನಟರ ದೇಹಭಾಷೆ, ಸಂಭಾಷಣೆ, ಅಭಿವ್ಯಕ್ತಿಪಡಿಸುವ ರೀತಿ ಎಲ್ಲವೂ ನಮ್ಮ ಯಕ್ಷಗಾನದ ನೆನಪು ಮೂಡಿಸಿತು.